ರುಚಿಕರವಾದ ಉಪಹಾರ
ಸಿಹಿ–ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
7 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 30 ॥ ಸಂಚಿಕೆ :35। UDP/1263/2018-20 || R.NO.50495/91 ॥ ತಾರೀಕು: 22–09–2020॥ ರೂ 5/– ॥ ವಾರ್ಷಿಕ ಚಂದಾ : 350/– ಅಂಚೆಯಲ್ಲಿ : 500/

## ಜಿರಾಪತಿ ಮಳೆ : ಗದ್ದೆ ಎಲ್ಲ ಹೊಳೆ

# ಅನಿರೀಕ್ಷಿತ ಆರ್ಭಟಕ್ಕೆ ಜಿಲ್ಲಾಡಳಿತಕ್ಕೆ ಭರಭಾರ



ಶನಿವಾರ, ಆದಿತ್ಯವಾರ ಅನಿರೀಕ್ಷಿತವಾಗಿ ನಿರೀಕ್ಷೆಗಿಂತ ಅತ್ಯಧಿಕ ಮಟ್ಟದಲ್ಲಿ ಸುರಿದ ಮಳೆಯಿಂದಾಗಿ ಹೊಳೆ ತುಂಬಿ ಹರಿದು, ಗದ್ದೆಗಳೂ ಹೊಳೆಗಳಾಗಿ, ಮೈದಾನಗಳು ಕೆರೆಯಾಗಿ, ರಸ್ತೆಗಳು ತೋಡುಗಳಾಗಿ ಮಾರ್ಪಟ್ಟದ್ದರಿಂದ ಜಿಲ್ಲಾಡಳಿತಕ್ಕೆ ಜನರನ್ನು ಕಾಪಾಡುವ ಹೊಣೆಗಾರಿ (ಭರಭಾರ) ತ್ವರಿತವಾಗಿ ಕೈಗೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು.

ಕುಂದಾಪುರ ಬೈಂದೂರು ತಾಲ್ಲೂಕುಗಳ ಜನರು ಸ್ವಲ್ಪ ಅದೃಷ್ಟವಂತರೆಂದೇ ಹೇಳಬಹುದಾಗಿದ್ದು ಉಡುಪಿ, ಕಾರ್ಕಳ, ಕಾಪು, ಬ್ರಹ್ಮಾವರ ತಾಲ್ಲೂಕಿನಲ್ಲಿ ಸುರಿದ ಮಳೆಗೆ ಹೋಲಿಸಿದರೆ ಅದರ ಕಾಲಂಶ ಮಳೆಯೂ ಇಲ್ಲಿ ಸುರಿಯಲಿಲ್ಲ. ಉಡುಪಿಯಲ್ಲಿ 400 ಮೀ.ಮಿ.ರಷ್ಟು ಮಳೆ ಸುರಿದರೆ ಕುಂದಾಪುರ ಬೈಂದೂರು ಸರಾಸರಿ 150 ಮಿ.ಮೀ . ಮಳೆಯನ್ನಷ್ಟೇ ಪಡೆದವು. ಆ ಕಾರಣದಿಂದ ಜಿಲ್ಲೆಯ ಉತ್ತರ ಭಾಗದಲ್ಲಿ ಹೆಚ್ಚು ಹಾನಿಯಾಗಲಿಲ್ಲ.

ಆದರೆ ಉಡುಪಿ ನಗರ , ಮಣಿಪಾಲದಲ್ಲೂ ಆದ ಅವಾಂತರ ಗಮನಿಸಿದರೆ ಕುಂದಾಪುರ, ಬೈಂದೂರು ತಾಲ್ಲೂಕಿನವರೂ ಎರಡು ದಿನ ಎಚ್ಚರಿಕೆಯಿಂದಲೇ ಕಾಲ ಕಳೆಯಬೇಕಾಗಿದೆ. ಕಡಲ ತೀರದಲ್ಲಂತೂ ಗಾಳಿ, ಮಳೆಯ ಆರ್ಭಟಕ್ಕೆ ಮೀನುಗಾರರೂ ಕಂಗಾಲಾಗಿದ್ದಾರೆ. ಸೆ.22ರ ತನಕ ಅಪಾಯದ ಎಚ್ಚರಿಕೆ ಜಿಲ್ಲಾಡಳಿತ ನೀಡಿದೆ.

ಅಂಗಡಿ, ಮನೆ, ಕಟ್ಟಡ , ರಸ್ತೆ ಮುಂತಾದವುಗಳಿಗೆ ಅಪಾರ ಹಾನಿಯಾಗಿದ್ದು ವಿದ್ಯುತ್ ಕಂಭಗಳೂ ಉರುಳಿವೆ. ಹಾನಿಯ ಅಂದಾಜು ಇನ್ನೂ ನಿಖರವಾಗಿ ತಿಳಿದಿಲ್ಲ. ಕಂದಾಯ ಅಧಿಕಾರಿಗಳು ಈ ಬಗ್ಗೆ ಸಮೀಕ್ಷೆ ನಡೆಸುತ್ತಿದ್ದಾರೆ.

## ಕೋವಿಡ್–19 : ಗಿಳಿಯಾರು ಕುಶಲ ಹೆಗ್ಡೆ ಚಾರಿಟೆಬಲ್ ಟ್ರಸ್ಟ್‌ನಿಂದ

# ಆರೋಗ್ಯ ಇಲಾಖೆಗೆ ವಾಹನ ಹಸ್ತಾಂತರ





ಕೊರೋನಾ ಸೋಂಕು ನಿಯಂತ್ರಣ ಅಭಿಯಾನದಲ್ಲಿ, ಉಡುಪಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ನೆರವಾಗುವ ದೃಷ್ಟಿಯಿಂದ, ಕುಂದಾಪುರದ ಗಿಳಿಯಾರು ಕುಶಲ ಹೆಗ್ಡೆ ಮೆಮೋರಿಯಲ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಮಾರುತಿ ಓಮ್ನಿ ವಾಹನವನ್ನು ಮಾದರಿ ಸಂಗ್ರಹ ಸಂಚಾರಿ ಘಟಕಕ್ಕಾಗಿ ಹಸ್ತಾಂತರಿಸಲಾಗಿದೆ.

ಕುಂದಾಪುರ ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಇದನ್ನು ಒಪ್ಪಿಸಲಾಗಿದ್ದು ಗ್ರಾಮೀಣ ಪ್ರದೇಶದಲ್ಲಿ ಗಂಟಲು ದ್ರವ ಮಾದರಿ ಸಂಗ್ರಹ ಸಂಚಾರಿ ಘಟಕವಾಗಿ ಈ ವಾಹನವನ್ನು ಪರಿವರ್ತಿಸಿದ್ದಾರೆ. ಸ್ವಯಂ ಚಾಲಿತ ಹೊಸ ಮಾದರಿಯ ಸೆನಿಟೈಸರ್ ಹಾಗೂ ಗಂಟಲು ದ್ರವ ಸಂಗ್ರಹ ವ್ಯವಸ್ಥೆಯಲ್ಲೂ ಹೊಸತನ ಈ ಸಂಚಾರಿ ಘಟಕದಲ್ಲಿದೆ.

ಗಿಳಿಯಾರು ಕುಶಲಹೆಗ್ಡೆ ಚಾರಿಟೆಬಲ್ ಟ್ರಸ್ಟ್‌ನ ಪರವಾಗಿ ಉಪ ಆಯುಕ್ತ ಕೆ. ರಾಜು ಅವರ ಮೂಲಕ, ಕುಂದಾಪುರ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ನಾಗಭೂಷಣ ಉಡುಪರಿಗೆ ಹಸ್ತಾಂತರಿಸಲಾಯಿತು.

ಉಪವಿಭಾಗಾಧಿಕಾರಿ ಕೆ. ರಾಜು ಅವರು ಮಾತನಾಡಿ "ಕೋವಿಡ್ –19 ಸಮಸ್ಯೆಯ ಕಾರಣದಿಂದ ಲಾಕ್‌ಡೌನ್ ಆದಂದಿನಿಂದ ಗಿಳಿಯಾರು ಕುಶಲ ಹೆಗ್ಡೆ ಟ್ರಸ್ಟ್‌ನವರು ವಲಸೆ ಕಾರ್ಮಿಕ ಜೀವನ ನಿರ್ವಹಣೆಗೆ ಸುಮಾರು 4.5 ಲಕ್ಷ ರೂ. ಮೌಲ್ಯದ ಆಹಾರ ವಸ್ತುಗಳ ಕಿಟ್, ವಸ್ತ್ರ ಮುಂತಾದವುಗಳನ್ನು ನೀಡಿದ್ದರು. ಈಗ ಆರೋಗ್ಯ ಇಲಾಖೆಗೆ ಮಾದರಿ ಸಂಗ್ರಹ ಘಟಕಕ್ಕಾಗಿ ವಾಹನ ನೀಡಿ ತುಂಬ ನೆರವು ನೀಡಿದ್ದಾರೆ. ಇಂತಹ ದಾನಿಗಳ ನೆರವು ಉಡುಪಿ ಜಿಲ್ಲೆಗೆ ಕೋವಿಡ್–19 ನಿರ್ವಹಣೆಯಲ್ಲಿ ಬಹಳ ಅನುಕೂಲವಾಗಿದೆ ಎಂದರು.

ಡಾ.ನಾಗಭೂಷಣ ಉಡುಪರು ವಿವರಣೆ ನೀಡಿ "ಮಾದರಿ ಸಂಗ್ರಹ ಸಂಚಾರಿ ಘಟಕದ ಪ್ರಯೋಗ ಬಹಳ ಯಶಸ್ವಿಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಪೇಟೆಗೆ ಬರಲಾಗದ, ಆರೋಗ್ಯ ಕೇಂದ್ರಕ್ಕೆ ಬರಲಾಗದ ಜನರ ಗಂಟಲು ದ್ರವ ತಪಾಸಣೆಗಾಗಿ ನಮಗೆ ಇನ್ನೊಂದು ವಾಹನ ಅಗತ್ಯವಾಗಿತ್ತು. ಗಿಳಿಯಾರು ಕುಶಲ ಹೆಗ್ಡೆ ಟ್ರಸ್ಟ್‌ನವರು ವಾಹನ ಬಳಕೆಗೆ ಒದಗಿಸಿ ಉಪಕಾರ ಮಾಡಿದ್ದಾರೆ" ಎಂದರು.

ಟ್ರಸ್ಟ್‌ನ ಪರವಾಗಿ ಕಾರ್ಯದರ್ಶಿ ಯು.ಎಸ್.ಶೆಣೈ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಟ್ರಸ್ಟಿಗಳಾದ ಉದಯ ಹೆಗ್ಡೆ, ಜಿ. ಸಂತೋಷ ಕುಮಾರ್ ಶೆಟ್ಟಿ, ಕೊರೊನಾ ಸೋಂಕಿನ ನಿಯಂತ್ರಣಕ್ಕೆ ಶ್ರಮಿಸುತ್ತಿರುವ ಆರೋಗ್ಯ ಇಲಾಖೆಯ ಅಧಿಕಾರಿಗಳು, ವೈದ್ಯರು, ಸಿಬ್ಬಂದಿಗಳನ್ನು ಅಭಿನಂದಿಸಿ ಶುಭಹಾರೈಸಿದರು.

ಖಜಾಂಚಿ ಸ್ನೇಹಾ ರೈ, ಟ್ರಸ್ಟಿಗಳಾದ ಕಿಶೋರ್ ಹೆಗ್ಡೆ, ಡಾ. ಸ್ವರೂಪ ಹೆಗ್ಡೆ, ಕೆ.ಕೆ.ರಾಮನ್ ಉಪಸ್ಥಿತರಿದ್ದರು.

ಕಾರ್ಯದರ್ಶಿ ನಾರಾಯಣ ಕೆ. ವಂದಿಸಿದರು.

### ರಾಜ್ಯದಲ್ಲೇ ಉಡುಪಿ ಮಾದರಿ ಜಿಲ್ಲೆ

ಕೊರೋನಾ ಸೋಂಕು ನಿಯಂತ್ರಣದಲ್ಲಿ ಉಡುಪಿ ಜಿಲ್ಲೆ ರಾಜ್ಯದಲ್ಲೇ ಮಾದರಿ ಜಿಲ್ಲೆಯಾಗಿದೆ. ಲಾಕ್‌ಡೌನ್ ಸಂದರ್ಭದಲ್ಲಿ ಗ್ರೀನ್‌ಝೋನ್‌ಗೆ ಬಂದ ಜಿಲ್ಲೆಯಾಗಿತ್ತು. ಕೊರೋನಾ ಸಾವಿನ ಪ್ರಮಾಣದಲ್ಲೂ ದೇಶದಲ್ಲೇ ಕಡಿಮೆ ಸಂಖ್ಯೆ ಹೊಂದಿತ್ತು. ಸಮರ್ಥ ಜಿಲ್ಲಾಧಿಕಾರಿಗಳು ನಮ್ಮ ಜಿಲ್ಲೆಗೆ ದೊರೆತಿದ್ದಾರೆ. ಅವರ ನಾಯಕತ್ವ ಎಲ್ಲ ಸರಕಾರಿ ನೌಕರರಿಗೂ ಸ್ಫೂರ್ತಿ. ಶಾಸಕರು, ಜನಪ್ರತಿನಿಧಿಗಳು ಸಹಕಾರ ನೀಡುತ್ತಿದ್ದಾರೆ. ಪೋಲೀಸ್ ವರಿಷ್ಠಾಧಿಕಾರಿಗಳು, ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳ ಮೂಲಕ ಉತ್ತಮ ಸೇವೆ ನೀಡುತ್ತಿದ್ದಾರೆ. ಆರೋಗ್ಯ ಇಲಾಖೆಯವರ ಸೇವೆ ಅನುಕರಣೀಯವಾಗಿದೆ, ಮಾದರಿಯಾಗಿದೆ. ಕೆಲವೇ ಜನರ ಅಪಸ್ವರ ಹೊರತು ಪಡಿಸಿದರೆ ಜಿಲ್ಲೆಯ ಜನರ ಸಹಕಾರವೂ ಶ್ಲಾಘನೀಯ. ದಾನಿಗಳ ಸಹಕಾರ ಮರೆಯುವಂತಿಲ್ಲ. ಕೋವಿಡ್ 19 ಸಮಸ್ಯೆಯ ಕಾಲದಲ್ಲಿ ಗಿಳಿಯಾರು ಕುಶಲಹೆಗ್ಡೆ ಟ್ರಸ್ಟ್‌ನ ನೆರವು ಅಭಿನಂದನೀಯ"

ಕೆ. ರಾಜು
ಉಪ ಆಯುಕ್ತರು, ಕುಂದಾಪುರ

### ಮಾಧ್ಯಮದವರಿಗೆ ಶ್ಲಾಘನೆ

ಉಪ ಆಯುಕ್ತ ಕೆ.ರಾಜು ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಾಗಭೂಷಣ ಉಡುಪ, ಕೋವಿಡ್–19 ನಿರ್ವಹಣೆಯಲ್ಲಿ ಮಾಧ್ಯಮದವರ ಸಹಕಾರವನ್ನು ಕೊಂಡಾಡಿದರು.

## ಮರಳಿಗೆ ದರ ನಿಗಧಿ
## ಜಿಲ್ಲಾಧಿಕಾರಿ ಜಿ. ಜಗದೀಶ್

ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮಗಳು 2020 ರನ್ವಯ, ಸರ್ಕಾರವು ಪ್ರತಿ ಮೆ.ಟನ್ ಮರಳಿಗೆ ರೂ. 60 ರಿಂದ ರಾಜಧನವನ್ನು ಪ್ರಸ್ತುತ ರೂ. 80 ಕ್ಕೆ ಹೆಚ್ಚಿಸಿರುವುದರಿಂದ, ರಾಜಧನದೊಂದಿಗೆ ಇತರೆ ಶುಲ್ಕಗಳನ್ನು ಹೆಚ್ಚುವರಿಯಾಗಿ ಪರವಾನಿಗೆದಾರರು ಸರ್ಕಾರಕ್ಕೆ ಪಾವತಿಸಬೇಕಾಗಿರುವುದರಿಂದ , ಶನಿವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಕರಾವಳಿ ನಿಯಂತ್ರಣ ವಲಯ ಪ್ರದೇಶದಲ್ಲಿ ಮರಳು ದಿಬ್ಬಗಳನ್ನು ತೆರವುಗೊಳಿಸಲು ಇರುವ ಜಿಲ್ಲಾ 7 ಸದಸ್ಯರ ಸಮಿತಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವಂತೆ, ಈ ಹಿಂದೆ ನಿಗಧಿಪಡಿಸಿದ್ದ ದರವನ್ನು ಪುನರ್ ಪರಿಶೀಲಿಸಿ ಕರಾವಳಿ ನಿಯಂತ್ರಣ ವಲಯ ವ್ಯಾಪ್ತಿಯಲ್ಲಿ ತೆರವುಗೊಳಿಸುವ ಮರಳಿಗೆ ದರ ನಿಗಧಿ ಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಸದಸ್ಯರ ಸಮಿತಿ, ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಅಧ್ಯಕ್ಷರಾದ ಜಿ.ಜಗದೀಶ್ ತಿಳಿಸಿದ್ದಾರೆ.

ನಿಗಧಿಪಡಿಸಿದ ದರಕ್ಕಿಂತ ಹೆಚ್ಚಿನ ದರ ವಿಧಿಸಿ ಸಂಗ್ರಹಿಸಿದಲ್ಲಿ,ಅಧಿಕಾರಿಗಳ ಮೊಬೈಲ್ ಸಂಖ್ಯೆಗಳು: ಆರ್. ಪದ್ಮಶ್ರೀ, ಭೂವಿಜ್ಞಾನಿ : 9980951087, ಗೌತಮ್ ಶಾಸ್ತ್ರಿ ಹೆಚ್, ಭೂವಿಜ್ಞಾನಿ : 6361286320, ಸಂಧ್ಯಾಕುಮಾರಿ, ಭೂವಿಜ್ಞಾನಿ : 9901370559 ಹಾಜಿರಾ ಸಜಿನಿ ಎಸ್, ಭೂವಿಜ್ಞಾನಿ : 9663836959 ಇವರಿಗೆ ತಿಳಿಸಬಹುದು ಎಂದು ಪ್ರಕಟಣೆ ತಿಳಿಸಿದೆ.